O.S 367/2016

ಪಿ. ಡಬ್ಲ್ಯೂ-**2**

ದಿನಾಂಕ:**07.02.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ಸಿ.ಎಸ್. ವಕೀಲರಿಂದ:</u>**

ನಾನು ಬಿ.ಎಡ್.ವರೆಗೂ ವ್ಯಾಸಂಗ ಮಾಡಿರುತ್ತೇನೆ. ಮೃತ ಶೇಖರಯ್ಯ ರವರ ತಂದೆ ಹೆಸರು ಲೇಟ್ ಕಪನಯ್ಯ. ಸದರಿಯವರಿಗೆ ನಾನು ಮತ್ತು ವಾದಿ ನಂ.1(ಎ) ರಿಂದ (ಡಿ) ಮತ್ತು (ಎಫ್) ವಾರಸುದಾರರು ಎಂದು ನ್ಯಾಯಾಲಯದಿಂದ ವಾರಸುದಾರರ ಪತ್ರವನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ವಾರಸುದಾರರ ಪ್ರಮಾಣ ಪತ್ರವನ್ನು ನ್ಯಾಯಾಲಯದಿಂದ ಪಡೆದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಮೃತ ಶೇಖರಯ್ಯ ರವರು ಯಾವ ಕಾರಣದಿಂದ ಈ ದಾವೆ ಹೂಡಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಮ್ಮ ಪಕ್ಕದ ಮನೆಯವರು ವಿನಾಕಾರಣ ನಮ್ಮ ಜಾಗಕ್ಕೆ ತೊಂದರೆ ನೀಡಿರುವ ಉದ್ದೇಶದಿಂದ ಈ ದಾವೆ ಹೂಡಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ಪಕ್ಕದ ಮನೆಯವರು ಯಾರು ಎಂದರೆ ಸಾಕ್ಷಿ ಜ್ಞಾನೇಶ, ಶಿವ, ಅಭಿಲಾಷ, ಸಿದ್ದಯ್ಯ, ಇನ್ನಿತರರು ಎಂದು ನುಡಿಯುತ್ತಾರೆ.

ಮೃತ ಶೇಖರಯ್ಯ ರವರ ತಂದೆ ಕಪನಯ್ಯ ರವರಿಗೆ ದಾವಾ ಸ್ವತ್ತು ಯಾವ ರೀತಿ ಬಂತು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಮ್ಮ ತಾತನಿಂದ ನಮ್ಮ ತಂದೆಗೆ ಡಿಮಾಂಡ್ ಎಕ್ಸಟ್ರ್ಯಾಕ್ಟ್ ಮೂಲಕ ಬಂದಿರುತ್ತದೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತು ಮೃತ ಶೇಖರಯ್ಯ ರವರ ತಂದೆ ಕಪನಯ್ಯ ರವರಿಗೆ 1962 ರಲ್ಲಿ ಬಂತು ಎಂದು ಬರೆಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1962 ರಲ್ಲಿ ಶೇಖರಯ್ಯ ರವರ ತಂದೆ ಕಪನಯ್ಯ ರವರಿಗೆ ಹೇಗೆ ಬಂತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ಮೂಲತಃ ಯಾರಿಗೆ ಸೇರಿದ್ದು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಪಿತ್ರಾರ್ಜಿತವಾಗಿ ಬಂದಿದ್ದು ಎಂದು ನಿಮ್ಮ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು

ನುಡಿಯುತ್ತಾರೆ. ವಾದ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಿಮ್ಮ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಡಿಮಾಂಡ್ ರೆಜಿಸ್ಟರ್ ಹಾಗೂ ಕಂದಾಯ ಪಾವತಿ ರಶೀದಿಗಳನ್ನು ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಡಿಮಾಂಡ್ ರೆಜಿಸ್ಟರ್ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ನಮ್ಮ ತಂದೆಯ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಯಾವುದಾದರೂ ಸ್ವತ್ತು ಯಾರಿಗಾದರೂ ಸರ್ಕಾರದಿಂದ ಮಂಜೂರಾಗಬೇಕಾದರೆ ದಾನ ಪತ್ರದ ಮೂಲಕ, ಕ್ರಯದ ಮುಾಲಕ, ಪೌತಿ ಖಾತೆಯ ಮೂಲಕ ಬರಬೇಕೆಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಂದೆಗೆ ಪೌತಿ ಖಾತೆಯ ಮೂಲಕ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಬಗ್ಗ  ನ್ಯಾಯಾಲಯಕ್ಕೆ ಡಿಮಾಂಡ್ ರೆಜಿಸ್ಟರ್ ನ್ನು ಹಾಜರುಪಡಿಸಿರುತ್ತೇನೆ.

ದಾವೆ ಹೂಡುವ ಸಮಯದಲ್ಲಿ ಮೃತ ಶೇಖರಯ್ಯ ರವರು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇದ್ದರು ಎಂದು ತೋರಿಸಲು ಯಾವ ದಾಖಲಾತಿಯನ್ನು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ಭಾವಚಿತ್ರವನ್ನು ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ನೀವು ಮತ್ತು ಮೃತ ಶೇಖರಯ್ಯ ರವರು ಸ್ವಾಧೀನ ಇರುವ ಬಗ್ಗ ನೋಡಿದವರು ಇದ್ದಾರಾ ಎಂದರೆ ಸಾಕ್ಷಿ ಇಡೀ ಗ್ರಾಮಸ್ಥರೆಲ್ಲರೂ ಇದ್ದಾರೆ ಎಂದು ನುಡಿಯುತ್ತಾರೆ. ಸದರಿ ಗ್ರಾಮಸ್ಥರ ಹೆಸರು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ವಾಸೇಗೌಡ, ತಮ್ಮೇಗೌಡ, ವೀರಭದ್ರೇಗೌಡ ಹಾಗೂ ಮುಂತಾದವರು ಎಂದು ನುಡಿಯುತ್ತಾರೆ. ಸದರಿಯವರನ್ನು ಕರೆದುಕೊಂಡು ಬಂದು ಸಾಕ್ಷ್ಯ ನುಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ದಾವಾ ಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ನಮಗೆ ಸೇರಿದ ಜಾಗ, ಉತ್ತರಕ್ಕೆಃ ಕೆಂಪರಾಜು ರವರ ಮನೆ ಮತ್ತು ದಕ್ಷಿಣಕ್ಕೆಃ ಸಾರ್ವಜನಿಕ ರಸ್ತೆ. ವಾದಿಯ ಮನೆಯ ಪಶ್ಚಿಮಕ್ಕೆ ಸಣ್ಣಜವರಮ್ಮ ರವರ ಮನೆ ಇರುತ್ತದೆ.  ವಾದಿಯ ಮನೆಯ ಉತ್ತರಕ್ಕೆಃ ಸಣ್ಣಯ್ಯ. ವಾದಿಯ ಮನೆಯ ಪೂರ್ವಕ್ಕೆ ರಸ್ತೆ ಇರುತ್ತದೆ. ಕೆಂಪರಾಜು ರವರ ಮನೆಯ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಮಗೆ ಸೇರಿದ ವಾಸದ ಮನೆ, ದಕ್ಷಿಣಕ್ಕೆಃ ನಮ್ಮ  ಜಾಗ.

ನಿಪಿ-1 ನ್ನು ಈ ದಾವೆಗೊಸ್ಕರ ಸೃಷ್ಟಿಸಿಕೊಂಡಿರುವ ದಾಖಲೆ ಎಂದರೆ ಸರಿಯಲ್ಲ. ಮೃತ

ಶೇಖರಯ್ಯ ರವರು ದಾವಾ ಸ್ವತ್ತಿನಲ್ಲಿ ಸ್ವಾದೀನ ಇದ್ದಿದ್ದರೆ ನಿರಂತರವಾಗಿ ಕಂದಾಯ ಪಾವತಿ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು 2003-04 ರಲ್ಲಿ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಪಂಚಾಯಿತಿಯವರು ಕಂದಾಯ ವಸೂಲಿ ಮಾಡಿಕೊಳ್ಳುವ ಸಮಯದಲ್ಲಿ ಮನೆ ಸ್ವಾಧೀನದಲ್ಲಿರುವವರನ್ನು ಪರಿಶೀಲಿಸಿ ವಸೂಲಿ ಮಾಡಿಕೊಳ್ಳುತ್ತಾರೆಂದರೆ ಸರಿ. 2003-04 ರಿಂದ ಈಚೆಗೆ ಕಂದಾಯ ಪಾವತಿ ಮಾಡಲು ಯಾವುದೇ ತೊಂದರೆ ಇರಲಿಲ್ಲ. ನೀವು ಹಾಗೂ ಮೃತ ಶೇಖರಯ್ಯ ರವರು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದರೆ ಪಂಚಾಯಿತಿಯವರು ಕಂದಾಯ ವಸೂಲಿ ಮಾಡುತ್ತಿದ್ದರು ಎಂದರೆ ಸಾಕ್ಷಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿರಂತರವಾಗಿ ಮೃತ ಶೇಖರಯ್ಯ ರವರು ದಾವೆ ಹೂಡುವವರೆಗೆ ದಾವಾ ಸ್ವತ್ತಿಗೆ ಕಂದಾಯ ಪಾವತಿ ಮಾಡಿರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ 2003-04 ರಲ್ಲಿ ಪಾವತಿಸಿರುವ ದಾಖಲಾತಿ ಮಾತ್ರ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿದ್ದು, ಖಾಲಿ ಜಾಗದ ಪಕ್ಕದಲ್ಲಿರುವ ಹೆಂಚಿನ ಮನೆ ನಿಮ್ಮದಾ ಎಂದರೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡ ಮೇರೆಗೆ, ಸದರಿ ಭಾವಚಿತ್ರವನ್ನು **ನಿಡಿ-1** ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಮನೆಯನ್ನು **ನಿಡಿ-1(ಎ)** ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಕಾಣಿಸುತ್ತಿರುವ ಪೈಪ್ ಇರುವ ಖಾಲಿ ಜಾಗಕ್ಕೆ ಸಂಬಂಧಪಟ್ಟಂತೆ ಮೃತ ಶೇಖರಯ್ಯ ರವರು ದಾವೆ ಹೂಡಿರುತ್ತಾರೆಂದರೆ ಸರಿ. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿ, ಇದೇ ಜಾಗ ಎಂದು ಪ್ರಶ್ನೆ ಮಾಡಲಾಗಿ, ಸಾಕ್ಷಿ ಹೌದು ಎಂದು ಉತ್ತರಿಸಿದ ಮೇರೆಗೆ ಅದನ್ನು **ನಿಡಿ-2** ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಲಾಗಿ, ದಾವಾ ಸ್ವತ್ತಿನಲ್ಲಿ ಎರಡು ಪೈಪ್ ಗಳನ್ನು ಸಾರ್ವಜನಿಕರು ಕುಡಿಯುವ ನೀರಿನ ಸಲುವಾಗಿ ಇಟ್ಟಂತಹ ಪೈಪುಗಳು ಎಂದರೆ ಸರಿ. ಸಾಕ್ಷಿ ಸದರಿ ಭಾವಚಿತ್ರವನ್ನು ಒಪ್ಪಿದ ಮೇರೆಗೆ ಅದನ್ನು **ನಿಡಿ-3** ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನಲ್ಲಿ ಸಾರ್ವಜನಿಕರಿಗೆ ಇದ್ದಂತಹ ಪೈಪಗಳನ್ನು ಕಿತ್ತು ಹಾಕಿ, ಅಲ್ಲೀ ಪೈಪ್ ಗಳನ್ನು ಹಾಕಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಜಾಗದಲ್ಲಿ ಇದ್ದ ಕಾರಣ ಕಿತ್ತು ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಬಗ್ಗೆ ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿದ್ದು, ಅದನ್ನು ಅವರು ಒಪ್ಪಿದ ಮೇರೆಗೆ **ನಿಡಿ-4** ಎಂದು

ಗುರುತಿಸಲಾಯಿತು. ಶ್ರೀನಿವಾಸ ಎಂಬ ಪಿ.ಡಿ.ಓ ರವರನ್ನು ನೋಡಿರುತ್ತೇನೆ. ಸಾಕ್ಷಿಗೆ ಸದರಿ ಶ್ರೀನಿವಾಸ ರವರ ಭಾವಚಿತ್ರವನ್ನು ತೋರಿಸಿದ್ದು, ಸಾಕ್ಷಿ ಅವರೇ ಶ್ರೀನಿವಾಸ ಎಂದು ಒಪ್ಪಿದ ಮೇರೆಗೆ **ನಿಡಿ-5** ಎಂದು ಗುರುತಿಸಲಾಯಿತು.

ಸಾಮಾನ್ಯವಾಗಿ ಪಿ.ಡಿ.ಓ ರವರ ಕೆಲಸ ಗ್ರಾಮ ಪಂಚಾಯಿತಿಯಲ್ಲಿ ಲಪಟಾಯಿಸುವಂತಹ ಸಾರ್ವಜನಿಕ ಆಸ್ತಿಯನ್ನು ರಕ್ಷಣೆ ಮಾಡುವಂತಹ ಕರ್ತವ್ಯ ಎಂದರೆ ಸರಿ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶವನ್ನು ಕೋರಿದ್ದರಿಂದ ನೀಡಿಲಾಯಿತು).**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.